ಓ ಎಸ್ ನಂಃ 558/2014
ಪಿ ಡಬ್ಲ್ಯೂ ಃ 1

ದಿಃ 29-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ವಿ ಕೆ ವಕೀಲರಿಂದ

20. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಯಾವುದೇ ದಾಖಲಾತಿಗಳಲ್ಲಿ ನರಸಮ್ಮ ಅಲಿಯಾಸ್ ಮಂಜುಳ ಎನ್ನುವ ಹೆಸರು ಇರುವುದಿಲ್ಲ ಎಂದರೆ ಸರಿ. ನಾನು ದಾವಾ ಹಾಕುವ ಸಂದರ್ಭದಲ್ಲಿ ನಾನು ನಂಜುಂಡಯ್ಯನವರ ಜೊತೆ ಮದುವೆ ಆದ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಕೊಟ್ಟಿರುತ್ತೇನೆ.

21. ನಾನು ನಂಜುಂಡಯ್ಯರವರ ಜೊತೆ ಮದುವೆ ಆಗಿರುವುದನ್ನು ತೋರಿಸಲು ಯಾವುದೇ ಫೋಟೋಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ನಾಗಮ್ಮನವರನ್ನು ನೋಡಿರುತ್ತೇನೆ. ನಾಗಮ್ಮ ಮತ್ತು ನಂಜುಂಡಯ್ಯನವರ ಮದುವೆ ಎಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾಗಮ್ಮ ಮತ್ತು ನಂಜುಂಡಯ್ಯನವರ ಮದುವೆ ಕೋಲಾರದ ಹತ್ತಿರ ಇರುವ ಕೋಟಿಲಿಂಗೇಶ್ವರ ದೇವಸ್ಥಾನದಲ್ಲಿ ಎಲ್ಲರಿಗೂ ತಿಳಿಸಿ ದಿಃ 05.04.1993 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ನಂಜುಂಡಯ್ಯನವರು ಮದುವೆ ಆಗಿರುವುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗಮ್ಮ ಮತ್ತು ನಂಜುಂಡಯ್ಯನವರ ದಾಂಪತ್ಯ ಜೀವನದಲ್ಲಿ ಕೃಷ್ಣ ಮತ್ತು ನವೀನ ಎನ್ನುವ ಇಬ್ಬರು ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ನಂಜುಂಡಯ್ಯನವರು 2 ನೇ ಮದುವೆ ಆಗಿರುವುದಿಲ್ಲ ನಾಗಮ್ಮ ನವರ ಜೊತೆ ಮೊದಲನೇ ಮದುವೆ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಜೊತೆ ಒಂದೇ ಮದುವೆ ಆಗಿರುತ್ತದೆ ಎಂದು ನುಡಿಯುತ್ತಾರೆ.

22. ನಿಪಿ 6 ಲಗ್ನ ಪತ್ರಿಕೆಯಲ್ಲಿ ಮಂಜುಳ ಎಂದು ಹೆಸರು ಇರುತ್ತದೆ ನರಸಮ್ಮ ಎಂದು ಇರುವುದಿಲ್ಲ ಎಂದರೆ ಸರಿ. ನಾನು ನಿಪಿ 6 ರಲ್ಲಿ ತೋರಿಸಲಾಗಿರುವ ನಂಜುಂಡಯ್ಯ ನಾಗಮ್ಮನ ಗಂಡ ನಂಜುಂಡಯ್ಯ ಅಲ್ಲ ಎಂದರೆ ಸರಿ. ಸರ್ಕಾರದವರು ನೀಡಿರುವ ಯಾವುದೇ ದಾಖಲಾತಿಗಳನ್ನು ನಾನು ನಂಜುಂಡಯ್ಯನ ಮೊದಲನೇ ಹೆಂಡತಿ ಎಂದು ತೋರಿಸಲು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನನ್ನ ಗಂಡ ಯಾವುದೇ ದಾಖಲಾತಿಗಳನ್ನು ಮಾಡಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾಗಮ್ಮನವರ ಗಂಡ ನಂಜುಂಡಯ್ಯ ತೀರಿಕೊಂಡು 19 ವರ್ಷ ಆಗಿರುತ್ತದೆ. ಸಾಕ್ಷಿಯು ಮುಂದುವರೆದು ನಾನು ನಂಜುಂಡಯ್ಯನವರ ಮೊದಲನೇ ಹೆಂಡತಿ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದೂಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,

.ಮಾಗಡಿ.